ವೊಬಲಗನ್ನು ಅಮಾನತ್ತಿನಲ್ಲಿಡಬೇಕು. ಷರತ್ತುಗಳಮೇರೆ ನಡದುಕೊಂಡರೆ, ಅಮಾನತ್ತಿನಲ್ಲಿ ಇಟ್ಟಿರುವ ವೊಬಲಗನ್ನು ಅಜ್ಜೆರು ಎರಡು ಮಾಹೆಗಳ ಖಿಸ್ತು ಒಗ್ಯೆ ಜಮಾ ತೆಗದುಕೊಳ್ಳಲ್ಪಡುತ್ತೆ.

5. ಹರಾಜುದ ಕೂಡ್ಲೆ ಡಿಪಾಜಿಟ್ಟು ವೊಬಲಗನ್ನು ಹಾಜರ್ಮಾಡದೇ ಇದ್ದರೆ ಹರಾಜು ಹಕ್ಕುದಾರಿಯನ್ನು ಅವಲ್ ಕಂಟ್ರಾಕ್ಟುದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ಬಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಪ್ರತಿ ಮಾಹೆಯಲ್ಲೂ ಕೊಡತಕ್ಕ ಖಿಸ್ತು ವೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನ ಬಳಿಗಾಗಿ ಹಾಜರ್ಮಾಡಲು ತಪ್ಪಿದರೆ, ಪಾವತೀ ಮಾಡಬೇಕಾಗಿರುವ ವೊಬಲಗಿನ ಮೇಲೆ ಪಾವತೀ ಮಾಡುವ ತಾರೀಖಿನವರಿಗೆ ಮಾಹೆಯಾನ ರೂಪಾಯಿ ಒಂದಕ್ಕೆ ಬಂದು ಪೈನಂತೆ ಬಡ್ಡಿ ಶೇರಿಸಿ ಖಿಸ್ತು ವೊಬಲಗನ್ನು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಉಳಿದ ಕಂಟ್ರಾಕ್ಟನ್ನು ಡೆಪ್ಯೂಟಿ ಕಮಿಷನರವರು ಇಷ್ಟಪಟ್ಟಲ್ಲಿ ಲುಕ್ಸಾನಿಗೆ ಅವಲ್ ಕಂಟ್ರಾಕ್ಟುದಾರನನ್ನು ಬಳಪಡಿಸಿ ಹರಾಜು ಮಾಡಲ್ಪಡುತ್ತೆ. ಎರಡನೇ ಹರಾಜಿನಿಂದ ನಫೇಬಂದಲ್ಲಿ ಮೊದಲು ಕಂಟ್ರಾಕ್ಟುದಾರನು ಸದರೀ ನಫೆಗೆ ಹಕ್ಕುದಾರನಾಗಿರುವದಿಲ್ಲ.

6. ಕಂಟ್ರಾಕ್ಟುದಾರನು ಪ್ರತಿಸಂತೆಯಲ್ಲಿಯೂ ವಸೂಲಾಗುವ ಫೀಯನ್ನು ತಪಶೀಲಾಗಿ ತಿಳಿಯುವಂತೆ ಬಂದು ಲೆಕ್ಕ ಇಟ್ಟುರಬೇಕು. ಸದರೀ ಲೆಕ್ಕವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಆಫೀಸಿನ ಹುದ್ದೇದಾರ್ರಿಗೆ ಅಪೇಕ್ಷಿಸಿದ ಕಾಲದಲ್ಲಿ ತೋರಿಸತಕ್ಕದ್ದಾಗಿರುತ್ತೆ.

7. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ಕಂಟ್ರಾಕ್ಟುದಾರನೇ ಆಗಲಿ ಯಾ ಅವನಕಡೆ ನೌಕರರೇ ಆಗಲಿ ವಿರೋಧವಾಗಿ ನಡದುಕೊಂಡರೆ ಕಂಟ್ರಾಕ್ಟನ್ನು ವಜಾ ಮಾಡುತ್ತೆ.

ಷೆಡ್ಯೂಲ್.

ಷಾಪ್ ಯಾ ಮಳಿಗೆ	ಪ್ರತ್ಯೇಕ ಹರಾಜುಮಾಡಲ್ಪಡುತ್ತೆ.		
ಗುಡಾರ	ಪ್ರತಿಯೊಂದಕ್ಕೆ	4	ಆಣೆ.
ಎತ್ತಿನ ಗಾಡಿ	,,	2	,,
ಬಡ್ಡರ ಗಾಡಿ	,,	1	,,
ಎತ್ತಿನ ಜೋಜಾ	,,	6	,,
ತಲೆ ಜೋಜಾ	,,	3	,,

ನೋಟ್ :—ಕೊನೇ ನಾಲ್ಕು ಐಟಂಗಳ ಮೇಲೆಯೂ ಮೂರ್ಕಟ್ಟು ಸರಹದ್ದನ್ನು ಪ್ರವೇಶಿಸುವಾಗಲೇ ಫೀ ವಸೂಲ್ಮಾಡತಕ್ಕದ್ದು. ಎರಡನೇ ಬಾಬಿನಮೇಲೆ ಗುಡಾರವನ್ನು ನೆಟ್ಟಾಗ ಫೀ ವಸೂಲ್ಮಾಡತಕ್ಕದ್ದು.

ಎಂ. ಕಾಂತರಾಜ ಅರಸ್,
ಪ್ರೆಸಿಡೆಂಟ್.

ಕಡೂರು ಡಿಸ್ಟ್ರಿಕ್ಟು.

ನೋಟಿಫಿಕೇಷನ್.

ತಾರೀಖು 27ನೇ ಏಪ್ರಿಲ್ 1903.

ಇದರಿಂದ ಸರ್ವಸ್ಯರಿಗೂ ತಿಳಿಯಪಡಿಸುವದೇನಂದರೆ, ಈ ಡಿಸ್ಟ್ರಿಕ್ಟಿಗೆ ಸೇರಿದ ಈ ಕೆಳಿಗೆ ಕಂಡ ತಾಲ್ಲೂಕುಗಳಲ್ಲಿ ಇರುವ (ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್‌ಗಳು ವಿನಹ) ಹಿಡುವಳಿಯಲ್ಲಿ ಇಲ್ಲದ ಸರ್ಕಾರಿ ಜಮೀನುಗಳಲ್ಲಿ ಇರತಕ್ಕ ತಂಗಡಿ ಮತ್ತು ಕಕ್ಕೆ ಜಕ್ಕೆಯನ್ನು 1903ನೇ ಜುಲೈ 1ನೇ ತಾರೀಖು ಲಾಗಾಯತು 1904ನೇ ಇಸವಿ ಜೂನ್ 30ನೇ ತಾರೀಖು ವರಿಗೆ ಜಮಾಯಿಸಿ ತೆಗೆದುಕೊಂಡು ಹೋಗತಕ್ಕ ಸ್ವತಂತ್ರದ ಹಕ್ಕುದಾರಿಯು ಈ ಕೆಳಿಗೆ ನಮೂದಾಗುವ ತಾರೀಖುಗಳಲ್ಲಿ ಮತ್ತು ಸ್ಥಳಗಳಲ್ಲಿ ಆಯಾಯ ತಾಲ್ಲೂಕು ಆಮಿಲರಿಂದ ರೇಂಜರ್‌ಗಳೊಡನೆ ಹರಾಜಿಗೆ ಇಡಲ್ಪಡುತ್ತೆ.

ನಂ.	ತಾಲ್ಲೂಕುಗಳ ಹೆಸರು.	ಹರಾಜು ತಾರೀಖು.	ಹರಾಜಾಗತಕ್ಕ ಸ್ಥಳ.
1	ಚಿಕ್ಕಮಗಳೂರು	20—5—1903	ತಾಲ್ಲೂಕು ಕಛೇರಿ
2	ಕಡೂರು	22—5—1903	ಡಿಟೋ
3	ತರೀಕೆರೆ	25—5—1903	ಡಿಟೋ

ನೋಟು :—ಈ ಹರಾಜು ಅವಶ್ಯಕ ಕಂಡು ಬಂದರೆ ಸಮ್ಮತವಾರು ಮಾಡಲ್ಪಡುತ್ತದೆ.

2. ಹರಾಜು ಆಯಾಯ ತಾರೀಖಿನಲ್ಲಿ ಮಧ್ಯಾಹ್ನದಲ್ಲಿ ಪ್ರಾರಂಭವಾಗುತ್ತೆ.

3. ಹರಾಜು ಡೆಪ್ಯೂಟಿ ಕಮಿಷರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

4. ಸವಾಲ್ ಮಾಡಲು ಇಚ್ಛೆವುಳ್ಳವರು ಖುದ್ದಾಗಿಯಾಗಲಿ ಅಥವಾ ಕ್ರಮ ಪ್ರಕಾರ ಮೊಖ್ತ್ಯಾರಿ ವಹಿಸಿ ವಿಜಂಟರ ಮುಖಾಂತ್ರವಾಗಿ ಹಾಜರಾಗಿ ಸವಾಲ್ ಮಾಡತಕ್ಕದ್ದು.

5. ಹರಾಜು ಕೈದಾದ ಕೂಡ್ಲೆ ಚಡಸವಾಲ್‌ದಾರನು ನಗದಾಗಿಯಾಗಲಿ ಅಥವಾ ಡೆಪ್ಯುಟಿ ಕಮಿಷರ್ ಸಾಹೇಬರವರ ಹೆಸರಿಗೆ ಇಂಡಾರ್ಸು ಮಾಡಲ್ಪಟ್ಟ ಪ್ರಾಮಿಸರಿ ನೋಟ್ ಮೂಲಕವಾಗಲಿ ಹರಾಜು ಮೊಬಲಗು ಮತ್ತು ಇದಕ್ಕೆ ಲೋಕಲ್ ಸೆಸ್ಸು ರೂ ಪಾಯಿಗೆ ಬಂದಾಣೆ ಮೇರೆ ಸೇರಿಸಿ ಒಟ್ಟು ಹಣದಲ್ಲಿ ಹತ್ತನೇ ಬಂದುಭಾಗ ಮೊಬಲಗನ್ನು ಡಿಪಾಜಿಟ್ ಹಾಜರ್ಮಾಡಬೇಕು. ಹಾಗೆ ಕೊಡಲು ತಪ್ಪಿದರೆ ಈ ಸ್ವತಂತ್ರದ ಹಕ್ಕನ್ನು ಪುನಹ ಹರಾಜು ಮಾಡುತ್ತೆ.

6. ಮೇಲೆ ಹೇಳಿದಂತೆ ದುಸರೆ ಹರಾಜು ಮಾಡುವದರಲ್ಲಿ ಲುಕ್ಸಾನಿಗೆ ಅವಲ್ ಹರಾಜುದಾರ ಗುರಿಯಾಗತಕ್ಕದ್ದು. ಅವನಿಗೆ ಆದುನರೆ ಹರಾಜಿನಲ್ಲಿ ಲಾಭ ಏಂದರೆ ಹಕ್ಕು ಏನೂ ಇರುವದಿಲ್ಲ. ನಷ್ಟಬಂದರೆ ಅವಲ್ ಹರಾಜಿನಲ್ಲಿ ಬಂದ ಸವಾಲಿನ ಮೊಬಲಿಗಿಗು ಎರಡನೇ ಹರಾಜಿನಲ್ಲಿ ಬಂದ ಹುಟ್ಟುವಳಿಗೂ ಇರುವ ಕಮ್ಮಿ ಮೊಬಲಗು ಅವಲ್ ಹರಾಜುದಾರನಿಂದ ರವಿನ್ಯೂ ಡಿವ್ಯಾಂಡಿನಂತೆ ವಸೂಲ್ಮಾಡಲ್ಪಡುವುದು.

7. ಚಡಸವಾಲ್ದಾರನು ಹರಾಜು ಮೊಬಲಗನ್ನು ಮತ್ತು ಅದರ ಲೋಕಲ್ ಸೆಸ್ಸನ್ನು ಮುಂಗಡವಾಗಿ ನಾಲ್ಕು ಸಮವಾದ ಮಾಹೆವಾರು ಖಿಸ್ತಿನಲ್ಲಿ ಈ ಕೆಳಗೆ ನಮೂದಿಸಿ ಇರುವ ತಾರೀಖಿನಲ್ಲಿ ಸರಕಾರಕ್ಕೆ ಪಾವತಿ ಮಾಡಬೇಕು. ಈ ಪ್ರಕಾರ ಯಾವ ಖಿಸ್ತೇ ಆಗಲಿ ಪಾವತಿ ಮಾಡದೆ ತಪ್ಪಿದರೆ ಮೊದಲು ಡಿಪಾಜಿಟ್ ಇಟ್ಟು ಮೊಬಲಗು ಸರಕಾರಕ್ಕೆ ಸೇರಿಸಲ್ಪಡುತ್ತೆ. ಅಲ್ಲದೆ ಮುಂದೆ ಚಕ್ಕೆ ಜಮಾಯಿಸಿಕೊಳ್ಳುವದಕ್ಕೆ ಇಜಾರೆ ಹಕ್ಕು ಸಹ ತಪ್ಪಿ ಹೋಗುತ್ತೆ. ಬಾಕಿ ಏನಾದರೂ ಮೊಬಲಗು ನಿಂತರೆ ರವಿನ್ಯೂ ಡಿವ್ಯಾಂಡಿನಂತೆ ವಸೂಲು ಮಾಡಲ್ಪಡುತ್ತೆ.

1ನೇ ಖಿಸ್ತು ..	31ನೇ ಆಗಸ್ಟ್ 1903	3ನೇ ಖಿಸ್ತು ...	31ನೇ ಅಕ್ಟೋಬರ್ 1903
2ನೇ ಖಿಸ್ತು ...	30ನೇ ಸೆಪ್ಟಂಬರ್ 1903	4ನೇ ಖಿಸ್ತು ...	30ನೇ ನವಂಬರ್ 1903

ಹರಾಜುದಾರನು ತನ್ನ ಇಜಾರೆ ಷರತ್ತು ಮೇರೆ ನಡಿಯುವದಕ್ಕೆ ಸ್ಯೂರಿಟಿಯ ಸೆಕ್ಯೂರಿಟಿಗಾಗಿ 5ನೇ ಪ್ಯಾರಾದಲ್ಲಿವಿಧಿಸಿದ ಡಿಪಾಜಿಟ್ ಮೊಬಲಗನ್ನು ಸರ್ಕಾರದಲ್ಲಿಯೇ ನಿಲ್ಲಿಸಿಕೊಳ್ಳಲ್ಪಡುತ್ತೆ.

8. ಹರಾಜು ಮಂಜೂರಿಯನ್ನು ಹರಾಜುದಾರನಿಗೆ ತಿಳಿಸಿದ 3 ದಿವಸಗಳ ಒಳಗಾಗಿ ಸರಿಯಾದ ಛಾಪಾಕಾಗದ್ದಲ್ಲಿ 9ನೇ ಪ್ಯಾರಾದಲ್ಲಿ ಕಂಡ ಷರತ್ತು ಮೇರೆ ನಡಕೊಳ್ಳಲು ಬದ್ಧನಾಗಿರುವದಕ್ಕೆ ಮುಚ್ಚಳಿಕೆ ಬರದು ರುಜುಮಾಡಿ ಕೊಡಬೇಕು.

9. ಈ ಕೆಳಗೆ ನಮೂದಾಗುವ ಷರತ್ತುಗಳಮೇರೆ ಹರಾಜುದಾರನು ನಡದುಕೊಳ್ಳಬೇಕು:—

2. ಬಂದು ವರುಷದ ವಳಗಿನ ಗಿಡ ಕಡಿಯಕೂಡದು.

3. ಇಜಾರೆಮೇರೆ ಸಾಗಿಸಿಕೊಂಡ ಚಕ್ಕೆ ವೊತ್ತದ ತಪ್ಪೀಲ್ ಲೆಖ್ಕ ಇಡಬೇಕು. ತಾಲ್ಲೂಕು ಆಮಿಲರು ಅಥವಾ ಡೆಪ್ಯುಟಿ ಕಮಿಷರ್ ಸಾಹೇಬರವರಿಂದ ನೇಮಿಸುವ ಇತರ ಆಫಿಸರು ಲೆಖ್ಕಾ ತನಿಖೆ ಮಾಡಲು ಬಂದಾಗ ಲೆಖ್ಕಾ ತೋರಿಸಬೇಕು.

4. ಡೆಪ್ಯುಟಿ ಕಮಿಷರ್ ಸಾಹೇಬರವರು ವಿಧಿಸುವ ರೀತಿಯಂತೆ ಚಕ್ಕೆ ಸಾಗಿಸಿಕೊಳ್ಳತಕ್ಕ ಬಗ್ಗೆ ಪ್ಯಾಸು ಪಡಿಯು ಬೇಕು.

5. 1904ನೇ ಜೂ ಆಖ್ಟೀರ್ ಒಳಗಾಗಿ ಕಡದು ಜಮಾಯಿಸಿ ಇಟ್ಟುಕೊಂಡಿರುವ ಚಕ್ಕೆಯಲ್ಲಾ ಆಯಾಯು ತಾಲ್ಲೂಕು ಸರಹದ್ದಿನ ಹೊರಕ್ಕೆ ಸಾಗಿಸಿಬಿಡಬೇಕು.

6. ಮೇಲ್ಕಂಡ ಷರತ್ತುಗಳಲ್ಲಿ ಯಾವದಕ್ಕಾಗಲಿ ತಪ್ಪಿ ನಡದರೆ ಇಜಾರೆ ರದ್ದು ಮಾಡಲ್ಪಡುತ್ತೆ. ಅಲ್ಲದೆ ಸಾಗಿಸದೆ ನಿಂತಿರುವ ಚಕ್ಕೆ ವಿಸಪ್ಪವೂ ಸರಕಾರಕ್ಕೆ ಸೇರಿಸಲ್ಪಡುತ್ತೆ.

7. ತಂಗಡಿ ಗಿಡವನ್ನು ಚಕ್ಕೆಗೋಸ್ಕರ ಹೊರ್ತು ಗೊಬ್ಬರದ ಸಪ್ಪುಗಾಗಿ ಆಗಲಿ ಸವುದೆ ಬಗ್ಗೆ ಆಗಲಿ ಅಥವಾ ಇನ್ಯಾವದಕ್ಕಾಗಿಯಾಗಲಿ ಕಡಿಯಕೂಡದು.

ಎಂ. ಜಿ. ರಾಮರಾವ್,
ಪೂರ್ ಡೆಪ್ಯುಟಿ ಕಮಿಷನರ್.

ಹಾಸನದ ಡಿಸ್ಟ್ರಿಕ್ಟ್ ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ ೧೯೦೨—೧೯೦೩ನೇ ಇಸವಿ ಮಿಸಿ ಅರ್ಜೀ ನಂಬರ್ 244.

ಹಾಸನ ತಾಲ್ಲೂಕು ಕಸಬಾ ಹೋಬಳಿ ಯಡೂರು ಗ್ರಾಮದಲ್ಲಿ ಇರುವ ಫವತಿ ಯಡೂರು ಪಟೇಲ ಕಾಳೇಗೌಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ ಹಾಸನ ತಾಲ್ಲೂಕು ಕಸಬಾ ಹೋಬಳಿ ಯಡೂರಲ್ಲಿ ಇರುವ ಕೆಂಪೆಗೌಡನು, ಮೃತಪಟ್ಟ ತಂದೆ ಕಾಳೆಗೌಡಂಗೆ ಖಾಸು ಮಗನಾಗಬೇಕೆಂಬ ಹಕ್ಕುದಾರಿ ಮೇಲೆ ಫವತಿಪಟ್ಟ ತಂದೆಗೆ ಬರತಕ್ಕ 53—8—0 ರೂಪಾಯಿಗಳ ಸೂಲವನ್ನು ವಸೂಲ್ಮಾಡುವದಕ್ಕೆ ಸ್ ೧೯೦೧ನೇ ಇಸವಿ VIIನೇ ನಂಬರ್ ರೆಗ್ಯುಲೇಷ್ಸ್ ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

[redacted]ೀ ದರಖಾಸ್ತುದಾರರಾದ ಕೆಂಪೇಗೌಡರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಜುಲೈ ತಿಂಗಳು ತಾರೀಖು 10ರಲ್ಲು ಕೇಸ್ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕಾಳೇಗೌಡರ ಆಸ್ತಿಗೆ ಹಕ್ಕುದಾರರಾದ ವಿಸಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇವರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೇ ಇಸವಿ ಏಪ್ರೆಲ್ ತಿಂಗಳು 11ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿ ಇದೆ.